# "ಸಂದೇಶ"



ಮುಸ್ಲಿಂ ವೆಲ್ಫೇರ್ ಎಸೋಷಿಯೇಶನ್‌ಗೆ 25ರ ಸಂಭ್ರಮ, ಜಿಲ್ಲೆಯ ಉದ್ದಗಲಗಳಲ್ಲಿ ಆರು ನೂರಕ್ಕೂ ಮಿಕ್ಕಿ ಸದಸ್ಯರನ್ನು ಹೊಂದಿಕೊಂಡು ಸತತ ಪರಿಶ್ರಮ, ಹೋರಾಟ, ಛಲಗಳಿಂದ ನಡೆದದ್ದು ಮಾತ್ರವಲ್ಲ ಜನ ಸೇವೆಗೈಯುತ್ತಾ ನಡೆಸಿದ್ದು ಸಾಹಸ. ಇದಕ್ಕಾಗಿ ಕೃರಜ್ಞತೆಗಳನ್ನು ಅಲ್ಲಾಹನಗೆ ಅರ್ಪಿಸುವುದೇ ಸೂಕ್ತ. ಕೃತಜ್ಞತೆಗಳು ಅಲ್ಲಾಹನಗೇ ಮೀಸಲು.

ಎಲ್ಲದಕ್ಕೂ ಕಾರಣಕರ್ತ ಅಲ್ಲಾಹನೇ, ಈ ಜೀವ, ಸೊತ್ತು ಮನಸ್ಸು, ಮಾರ್ಗ ಎಲ್ಲದರ ಒಡೆಯ ಅವನೇ. ಈ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ಅವನ ಗ್ರಂಥದ ಸೂಕ್ತಗಳು, ಅವನ ಪ್ರವಾದಿಯ ಪ್ರೇಮ ಈ ಮಾರ್ಗದಲ್ಲಿ ನಡೆಯಲು ಪ್ರೇರಕಶಕ್ತಿಯಾಯಿತು. ಇದಲ್ಲದೇ ಹೋದರೆ ಈ ಮಾರ್ಗ ಸುಲಭ ಸಾಧ್ಯವಲ್ಲ.

ಜನಸೇವೆಗೈಯುವುದು ಅವನ ಸೇವೆಗೆ ಸಮಾನ. ಅಗತ್ಯ ಉಳ್ಳವನಗೆ ಉಣಿಸುವುದು, ತೊಡಿಸುವುದು ಶುಶ್ರೂಷೆಗೈಯುವುದು ನೀವು ಇದನ್ನು ಮಾಡುವಿರಾದರೆ ವಿಚಾರಣೆಯ ದಿನ ಅದನ್ನು ನನ್ನಲ್ಲಿ ಪಡೆಯುವಿರಿ ಎಂಬುದಕ್ಕೆ ಇದೇ ಅರ್ಥದಲ್ಲಿವೆ? ಭೂಮಿಯ ಮೇಲೆ ಕರುಣೆ ತೋರಿರಿ ಆಕಾಶದವನು ನಮ್ಮ ಮೇಲೆ ಕರುಣೆ ತೋರುವನು ಎಂದು ಪ್ರವಾದಿಗಳು ಹೇಳಿದ್ದು ಇದೇ ಅರ್ಥದಲ್ಲಿ ಅಲ್ಲವೇ?

ಇದನ್ನು ಮುಂದಿಟ್ಟಾಗ ಜನಸೇವೆಗೆ ಮನಸ್ಸು ಕಾತರಿಸುತ್ತದೆ. ಜನ ಸೇವೆ ನಮ್ಮ ದಿಚರಿಯಲ್ಲಿ ನರೆಯಲ್ಪಡುತ್ತದೆ. ಜನಸೇವೆಗಳಿಲ್ಲದ ದಿನಗಳು ಕಳೆಯುವುದಿಲ್ಲ. ಮದ್ರಸಾಗಳಿಗೆ ಆರ್ಥಿಕ ಸಹಾಯ ಸಾಧ್ಯವಾಗುತ್ತೆ. ಉಪವಾಸವಿದ್ದುಕೊಂಡು ಝಕಾತ್ ಸಂಗ್ರಹಿಸಲು ಅದನ್ನು ವಿದ್ಯಾರ್ಥಿವೇತನ, ಬಡಮಕ್ಕಳ ಸುನ್ನತ್, ಮಹಿಳೆಯರಿಗೆ ಹೊಲಿಗೆಯಂತ್ರ, ವೃದ್ಧಾಪ್ಯ ವೇತನ ನೀಡಿ, ಅವರ ಕಷ್ಟದಲ್ಲಿ ಸಹಾಯವಾಗುವುದು ಇದೇ ಕಾರಣಕ್ಕಾಗಿಯಾಗುತ್ತೆ.

ಫಿತ್ರವನ್ನು ಸಂಗ್ರಹಿಸಿ ಚಂದ್ರ ದರ್ಶನವಾದ ಕೂಡಲೇ ಬಡವರ ಮನೆಗಳನ್ನು ಹುಡುಕಿಕೊಂಡು ಹೋಗುತ್ತಾ ಹಬ್ಬದ ಸಂತೋಷದಲ್ಲಿ ಎಲ್ಲರಂತೆ ಅವರನ್ನು ಕೂಡ ಸಂತೋಷದಲ್ಲಿ ಭಾಗಿಯಾಗಿಸುವಂತೆ ಪ್ರಯತ್ನಿಸುವುದು ಇದನ್ನು ಇಲ್ಲಿಯ ತನಕ ನರಂತರ ಮಾಡುತ್ತ ಬಂದಿರುವುದು ಜನ ಮನ್ನಣೆಗೆ ಮಾತ್ರವಲ್ಲ, ಇಸ್ಲಾಮಿನ ಫಿತ್ರ ವ್ಯವಸ್ಥೆಗೆ ಒಂದು ಉತ್ತಮ ಉದಾಹರಣೆಯಾಗಿದೆ.

ಸೇವೆಗಳೂ ನಸ್ವಾರ್ಥವಾಗಬೇಕು, ಅದು ಜನರ ಶಹಬ್ಬಾಸ್‌ಗಿರಿ ಪಡೆಯುವುದಕ್ಕಾಗಿರದೆ ಅಲ್ಲಾಹನ ಸಂಪ್ರೀತಿಗಾಗಿ ಕೇವಲ ಅವನನ್ನು ಮೆಚ್ಚಿಸಲಿಕ್ಕಾಗಿ ಆಗಬೇಕು. ಆವಾಗ ಸೇವೆಗಳಿಗೆ ಬೆಲೆಯಿರುತ್ತದೆ. ಗುಣಮಟ್ಟ ಉತ್ತಮವಾಗುತ್ತ. ಯಾವ ಕೈಗಳು ನೀಡಿವೆಯೋ ಆ ಕೈಗಳಿಗೆ ವಾಪಾಸು ಪಡೆಯಲು ಸಾಧ್ಯವಾಗುತ್ತೆ. ಅಂದರೆ ಕೇವಲ ಅಲ್ಲಾಹನಗಾಗಿ ಆದಾಗ ಅವನಂದ ಬಹಳಷ್ಟು ಪಡೆಯಲು ಖಂಡಿತ ಸಾಧ್ಯವಿದೆ.

ಇಂತಹ ವಿಶಾಲ ಹೃದಯದಿಂದ ಜನಸೇವೆಗೈಯುವ, ಇನ್ನೂ ಹೆಚ್ಚಿನ ಅವಕಾಶಗಳು ಒದಗಿಬರಲಿ. ಮಾಡಿದಂತಹ ಸೇವೆಗಳು ಸ್ವೀಕೃತವಾಗಲಿ, ನೀಡಿದವರ ಕೈಗಳು ಇನ್ನೂ ಹೆಚ್ಚಿನದ್ದನ್ನು ನೀಡುವಂತಾಗಲಿ. ಅವರ ಕೈಗಳು ಬಲಗೊಳಗಳ್ಳಲಿ, ಪಡೆದವರ ಕೈಗಳು ನೀಡುವ ಕೈಗಳಾಗಿ ಪರಿವರ್ತನೆಯಾಗಲಿ ಎಂಬ ಪ್ರಾರ್ಥನೆ ಅಲ್ಲಾಹನಲ್ಲಿ

ಅಕ್ಬರ್ ಅಲಿ, ಉಡುಪಿ
ರಾಜ್ಯ ಕಾರ್ಯದರ್ಶಿ
ಊ.ಖ.ಖ. (ಹ್ಯುಮಾನಟೇರಿಯನ್ ರಿಲೀಫ್ ಸೊಸೈಟಿ)
ಜಮಾಅತೆ ಇಸ್ಲಾಮೀ ಹಿಂದ್, ಕರ್ನಾಟಕ ಮತ್ತು ಗೋವಾ.